ಕ್ರೀಮಿಸ್‌ನಂ.291/2024

ಪಿ.ಡಬ್ಲ್ಯೂ-1

**<u>ದಿಃ 31-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

<u>**ಪಾಟೀ ಸವಾಲುಃ** ಎದುರುದಾರರ ಪರ ಶ್ರೀ ಜಿ ಎನ್ ಸಿ **ವಕೀಲರಿಂದ.**</u>

ನನಗೂ ಮತ್ತು ಎದುರುದಾರರಿಗೂ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಮದುವೆಯಾಗಿ ಎರಡು ವರ್ಷಗಳ ಕಾಲ ಎದುರುದಾರರ ಜೊತೆ ನಾನು ಚೆನ್ನಾಗಿ ಜೀವನ ಮಾಡಿರುತ್ತೇನೆ. ಎರಡು ವರ್ಷಗಳ ನಂತರ ಎದುರುದಾರರು ನನಗೆ ಹೊಡೆಯುವುದು ಬೈಯುವುದು ಮಾಡುತ್ತಿದ್ದ ಕಾರಣ ನಾನು ನನ್ನ ತವರು ಮನೆಗೆ ಹೋಗುತ್ತಿದ್ದೆ. ಮೊದಲನೇ ಮಗನಿಗೆ 6 ವರ್ಷ , ಮತ್ತೊಬ್ಬ ಮಗನಿಗೆ 5 ವರ್ಷ. ಮಕ್ಕಳು ಪ್ರಸ್ತುತ ಎದುರುದಾರರ ಜೊತೆ ಇದ್ದು, ಓದುತ್ತಿರುತ್ತಾರೆ. ಸಾಕ್ಷಿ ಮುಂದುವರಿದು ನ್ಯಾಯಾಲಯದಿಂದ ನಮ್ಮನ್ನು ಜೊತೆಗಿರಲು ಕಳುಹಿಸಿದಾಗ ಮಕ್ಕಳನ್ನು ಅವರು ಇಟ್ಟುಕೊಂಡು ನನ್ನನ್ನು ಮನೆಯಿಂದ ಹೊರಗೆ ಹಾಕಿರುತ್ತಾರೆ. ಈಗ ಒಂದೂವರೆ ವರ್ಷದಿಂದ ಮಕ್ಕಳು ಅವರ ಜೊತೆ ಇದ್ದು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಪೆಟ್ರೋಲ್ ಬಂಕ್ ಹಿಂಭಾಗದಲ್ಲಿರುವ ಸೆಂಟ್ ಮೇರೀಸ್ ಶಾಲೆಯಲ್ಲಿ ನನ್ನಮಕ್ಕಳು ಓದುತ್ತಿದ್ದರು.

ಎದುರುದಾರರು ನನ್ನ ವಿರುದ್ಧ ನಾನು ನನ್ನ ತಾಯಿ ಮನೆಯಲ್ಲಿರುವ ಸಮಯದಲ್ಲಿ ಎಂ ಸಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನೀವುಗಳು ರಾಜಿಯಾಗಿ ಎದುರುದಾರರ ಜೊತೆ ಜೀವನ ಮಾಡಲು ಒಪ್ಪಿಕೊಂಡು ಅವರ ಜೊತೆ ಹೋಗಿರುತ್ತಿರಾ ಎಂದರೆ ಸರಿ. ನಾನು ಪ್ರಸ್ತುತ ಎಲ್ಲೂ ಕೆಲಸ ಮಾಡುತ್ತಿಲ್ಲ. ನನ್ನ ತಂದೆತಾಯಿ ಜೊತೆ ಇರುತ್ತೇನೆಂದು ನುಡಿದಿರುತ್ತಾರೆ. ನೀವುಟೈಪಿಂಗ್ ಕಂಪ್ಯೂಟರ್ ಕೆಲಸ ಮಾಡುತ್ತಿರುತ್ತಿರಾ ಎಂದರೆ ಸರಿಯಲ್ಲ. ನಾನು 2ನೇ ಪಿಯುಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರಸ್ತುತ ನನ್ನಮಕ್ಕಳ ವಿದ್ಯಾಭ್ಯಾಸವನ್ನು ಎದುರುದಾರರೇ ನೋಡಿಕೊಳ್ಳುತ್ತಿರುತ್ತಾರೆಂದರೆ

ಸರಿ. ಎದುರುದಾರರಿಗೆ ವಯಸ್ಸಾದ ತಂದೆ ತಾಯಿ ಇದ್ದಾರೆಂದರೆ ಸರಿ. ಎದುರುದಾರರ ತಂದೆ ಹೃದಯ ಸಂಬಂಧಿ ರೋಗವನ್ನು ಹೊಂದಿದ್ದು, ಅವರಿಗೆ ಚಿಕಿತ್ಸೆ ಕೊಡಿಸುತ್ತಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಎದುರುದಾರರು ಲೈಫ್ ಇನ್ಸುರೆನ್ಸ್ ಮಾಡಿಸಿದ್ದು, ಪ್ರತಿತಿಂಗಳು 3,225/- ರೂ ಹಣವನ್ನು ಕಟ್ಟುತ್ತಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪಾಲಿಸಿ ನಂ.727365717, ಮತ್ತೊಂದು ಪಾಲಿಸಿ ನಂ 727442660 ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.